**Ex.No. 71/2015**
**ಪಿ.ಡಬ್ಲ್ಯೂ–01**

**<u>ಸಾಕ್ಷಿಯನ್ನು ದಿನಾಂಕಃ 14.06.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ತೀರ್ಪುಋಣಿ ಪರ ಶ್ರೀ. ವಿ.ಎಂ.ಬಿ. ವಕೀಲರಿಂದಃ</u>**

ನಾನು ಡಿಕ್ರಿದಾರರ ಬ್ಯಾಂಕ್ ನಲ್ಲಿ ಸುಮಾರು 35 ವರ್ಷಗಳಿಂದ ಕೆಲಸ ಮಾಡುತ್ತಿದ್ದು, ಫೆಬ್ರವರಿ 2020 ರಿಂದ ಪ್ರಭಾರ ಬ್ಯಾಂಕ್ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದೇನೆ. 2020 ಕ್ಕಿಂತ ಮುಂಚೆ ಬೆರಳಚ್ಚುಗಾರಳಾಗಿ ಮತ್ತು ಲೆಕ್ಕ–ವಿಭಾಗದಲ್ಲಿ ಕೆಲಸ ಮಡುತ್ತಿದ್ದೆ. ನಾನು ಪ್ರಭಾರ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ದಾಖಲೆ ಹಾಜಾರುಪಡಿಸಿರುವುದಿಲ್ಲ. ನಾನು 35 ವರ್ಷಗಳಿಂದ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಿರುವುದರಿಂದ ಬ್ಯಾಂಕ್ ನ ಸಂಪೂರ್ಣ ವ್ಯವಹಾರ ನನಗೆ ಗೊತ್ತಿರುತ್ತದೆ ಎಂದರೆ ಸರಿ. ನಮ್ಮ ಬ್ಯಾಂಕ್ ನಿಂದ ಸಾಲ ನೀಡುವಾಗ ಸಾಲ ಪಡೆಯುವ ಫಲಾನುಭವಿಗಳಿಂದ ಅರ್ಜಿ ಸ್ವೀಕರಿಸುತ್ತೇವೆಂದರೆ ಸರಿ. ಅರ್ಜಿ ಸ್ವೀಕರಿಸಿದ ನಂತರ ಸಾಲ ಮಂಜೂರು ಮಾಡಲು ಆಡಳಿತ ಮಂಡಲಿ ಸಭೆಯಲ್ಲಿ ಮಂಡಿಸಿ ನಂತರ ದಾಖಲಾತಿಗಳನ್ನು ಪರಿಶೀಲಿಸಿ ಠರಾವನ್ನು ಹೊರಡಿಸುತ್ತೇವೆ. ನಂತರ ಕೇಂದ್ರ ಕಛೇರಿಯ ಅನುಮತಿ ಪಡೆದು ನಂತರ ಫಲಾನುಭವಿಯಿಂದ ಆಧಾರ ಪತ್ರ ಬರೆಸಿಕೊಂಡು ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿ ಮಾಡಿಸುತ್ತೇವೆ. ಎಲ್ಲಾ ಪ್ರಕ್ರಿಯೆ ಮುಕ್ತಾಯವಾದ ನಂತರ ಯಾವ ಫಲಾನುಭವಿಗೆ ಎಷ್ಟು ಸಾಲ ಮಂಜೂರು ಮಾಡಿರುತ್ತೇವೆಂದು ಸಂಬಂಧಪಟ್ಟ ರಿಜಿಸ್ಟರ್ ನಲ್ಲಿ ನಮೂದಿಸುತ್ತೇವೆಂದರೆ ಸರಿ. ಸದರಿ ರಿಜಿಸ್ಟರ್ ನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಅದೇ ರೀತಿ ಸದರಿ ರಿಜಿಸ್ಟರ್ ನಲ್ಲಿ ಫಲಾನುಭವಿಗಳು ಎಷ್ಟು ಕಂತು ಪಾವತಿಸಬೇಕು ಮತ್ತು ಎಷ್ಟು ಸಾಲವನ್ನು ಪಾವತಿ ಮಾಡಿರುತ್ತಾರೆಂದು ನಮೂದಿಸಿರುತ್ತೇವೆಂದರೆ ಸರಿ. ಅದೇ ರೀತಿ ಸಾಲ ಪಡೆದವರು ಸಾಲ ಮರುಪಾವತಿಸುವ ಸಮಯದಲ್ಲಿ ರಸೀದಿಗಳನ್ನು ನೀಡುತ್ತೇವೆಂದರೆ ಸರಿ. ಸದರಿ ರಸೀದಿಗಳ ನಕಲು ಪ್ರತಿಗಳು

ನಮ್ಮ ಬ್ಯಾಂಕ್ ನಲ್ಲಿರುತ್ತವೆಂದರೆ ಸರಿ. ತೀರ್ಪುಋಣಿಯು ನಮ್ಮ ಬ್ಯಾಂಕ್ ಗೆ ಎಷ್ಟು ಸಾಲವನ್ನು ಮರುಪಾವತಿಸಿರುತ್ತಾರೆಂದು ರಸೀದಿಗಳ ಜೆರಾಕ್ಸ್ ಪ್ರತಿಗಳು ಇರುತ್ತವೆಯಾ ಎಂದರೆ ಲಭ್ಯವಿದ್ದರೆ ಹಾಜರುಪಡಿಸುತ್ತೇನೆ. ಸಾಲ ಮರುಪಾವತಿಯಾಗುವವರೆಗು ಸಂಬಂಧಪಟ್ಟ ದಾಖಲೆಗಳನ್ನು ನಿರ್ದಿಷ್ಟ ಸ್ಥಳದಲ್ಲಿ ಇಡಬೇಕಾದ ಜಾವಾಬ್ದಾರಿ ನಮ್ಮ ಕರ್ತವ್ಯವಾಗಿರುತ್ತದೆಂದರೆ ಸರಿ. ಯಾವುದೇ ಒಬ್ಬ ವ್ಯಕ್ತಿಗೆ ಸಾಲ ನೀಡುವಾಗ ಆಧಾರ ಪತ್ರವನ್ನು ನೋಂದಣಿ ಮಾಡಿಸಿಕೊಂಡು ಸಾಲ ನೀಡುತ್ತೇವೆಂದರೆ ಸರಿ. ಆಧಾರ ಪತ್ರ ನೋಂದಣಿಯಾದ ನಂತರ ಸಂಬಂಧಪಟ್ಟ ಋಣಭಾರರಾಹಿತ್ಯ ಪ್ರಮಾಣ ಪತ್ರದಲ್ಲಿ ದಾಖಲೆಯಾಗುತ್ತದೆಂದರೆ ಸರಿ. ಸಾಮಾನ್ಯವಾಗಿ ಬ್ಯಾಂಕ್ ಗಳಲ್ಲಿ ಋಣಭಾರರಾಹಿತ್ಯ ಪ್ರಮಾಣ ಪತ್ರವನ್ನು ಪರಿಶೀಲಿಸಿ ಸದರಿ ಆಸ್ತಿಯ ಮೇಲೆ ಯಾವುದೇ ಸಾಲ ಪಡೆದಿರುವುದಿಲ್ಲವೆಂದು ಖಾತ್ರಿಪಡಿಸಿಕೊಂಡ ನಂತರ ಸಾಲ ನೀಡುತ್ತೇವೆಂದರೆ ಯಾವುದೇ ಸುಸ್ತಿದಾರರಾಗದಿದ್ದಾಗ ಮತ್ತು ಖಾತೆ ಚಾಲ್ತಿಯಲ್ಲಿದ್ದಾಗ ಬೆಳೆ ಸಾಲ ಕೊಡುತ್ತಾರೆ. ಸಾಮಾನ್ಯವಾಗಿ ಎಲ್ಲಾ ಬ್ಯಾಂಕುಗಳಲ್ಲಿ ಈ ನಿಯಮವನ್ನು ಅಳವಡಿಸುತ್ತಾರೆ. ನಾವು ಸಾಲ ನೀಡುವಾಗ ಆಸ್ತಿಯ ಮೂಲ ದಾಖಲೆಗಳನ್ನು ಪಡೆದು ಸಾಲ ನೀಡುತ್ತೇವೆಂದರೆ ಸರಿ. ನಮ್ಮ ಬ್ಯಾಂಕ್ ನಿಂದ ತೀರ್ಪುಋಣಿಗೆ ಸಾಲ ನೀಡುವಾಗ ಅವರ ಆಸ್ತಿಯ ಮೂಲ ದಾಖಲೆಗಳನ್ನು ಪಡೆದು ಸಾಲ ನೀಡಿದೆವು ಎಂದರೆ ಸರಿ. ನಮ್ಮ ಬ್ಯಾಂಕ್ ನಲ್ಲಿ ಪಡೆದ ಸಾಲವನ್ನು ಮರುಪಾವತಿಸಿದ ನಂತರವೇ ಮೂಲ ದಾಖಲಾತಿಗಳನ್ನು ಸಾಲಗಾರರಿಗೆ ವಾಪಸ್ ನೀಡುತ್ತೇವೆಂದರೆ ಸರಿ. ತೀರ್ಪುಋಣಿಯು ನಮ್ಮ ಬ್ಯಾಂಕ್ ಗೆ ಪಾವತಿಸಬೇಕಾದ ಎಲ್ಲಾ ಸಾಲದ ಹಣವನ್ನು ಮರುಪಾವತಿಸಿ ತನಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲೆಗಳನ್ನು ವಾಪಸ್ ಪಡೆದಿರುತ್ತಾರೆಂದರೆ ಸರಿಯಲ್ಲ. ತೀರ್ಪುಋಣಿಗೆ ಸೇರಿದ ಮಸಹಳ್ಳಿ ಗ್ರಾಮದಲ್ಲಿರುವ ಸ.ನಂ. 52/1 ಕ್ಕೆ ಸಂಬಂಧಿಸಿದ ಆಸ್ತಿಗೆ ಸಂಬಂಧಿಸಿದಂತೆ ನಾವು ಸಾಲ ನೀಡಿರುತ್ತೇವೆಂದರೆ ಸರಿ. ಈ ಮೇಲೆ ಹೇಳಿದ ಜಮೀನಿಗೆ ಸಂಬಂಧಿಸಿದ ಸಾಲ

ಪಡೆದು ತೀರ್ಪುಋಣಿಯು ಎಲ್ಲಾ ಸಾಲವನ್ನು ಮರುಪಾವತಿಸಿದ ನಂತರವೇ ಈಗ ನನಗೆ ತೋರಿಸುತ್ತಿರುವ ಎನ್.ಡಿ.ಸಿ. – No Due Certificate ಕೊಟ್ಟಿರುತ್ತೇವೆಂದರೆ ನಾವು ಎನ್.ಒ.ಸಿ. – No Overdue Certificate ನೀಡಿರುತ್ತೇವೆ. ಈಗ ನನಗೆ ತೋರಿಸುತ್ತಿರುವ ಈ ಮೇಲೆ ಹೇಳಿದಂತಹ ದಾಖಲೆ ನಮ್ಮ ಬ್ಯಾಂಕ್ ನಿಂದ ನೀಡಿದ ದಾಖಲೆಯಾಗಿರುತ್ತದೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ, ಒಪ್ಪಿ ಗುರುತಿಸಿದ್ದರಿಂದ ಅದನ್ನು **ನಿ.ಡಿ.–1** ಎಂದು ಗುರುತಿಸಲಾಯಿತು. ಒಂದು ವೇಳೆ ತೀರ್ಪುಋಣಿಯು ಸುಸ್ತಿದಾರರಾಗಿದ್ದರೆ ಪ್ರತ್ಯೇಕವಾಗಿ ಧೃಡೀಕರಣ ಪತ್ರ ಬರೆದುಕೊಡಬಹುದಾಗಿತ್ತು ಎಂದರೆ ನಮ್ಮ ಬ್ಯಾಂಕ್ ನಲ್ಲಿ ನಿ.ಡಿ.–1ರ ಮೇಲೂ ಸಹ ಬರೆಯುವ ಕ್ರಮವಿರುತ್ತದೆ. ತೀರ್ಪುಋಣಿಯು ನಮ್ಮ ಬ್ಯಾಂಕ್ ಗೆ ಪಾವತಿಸಬೇಕಾದ ಎಲ್ಲಾ ಸಾಲದ ಹಣವನ್ನು ಮರುಪಾವತಿಸಿದ ನಂತರವೇ ನಮ್ಮ ಬ್ಯಾಂಕ್ ನಿಂದ ಯಾವುದೇ ಬಾಕಿ ಇರುವುದಿಲ್ಲವೆಂಬ ಪ್ರಮಾಣ ಪತ್ರದ ಜೊತೆಗೆ ಮೂಲ ದಾಖಲೆಗಳನ್ನು ತೀರ್ಪುಋಣಿಗೆ ನೀಡಿರುತ್ತೇವೆಂದರೆ ಸರಿಯಲ್ಲ. ನಂತರ ತೀರ್ಪುಋಣಿಯು ಸರಗೂರಿನ ಭಾರತೀಯ ಸ್ಟೇಟ್ ಬ್ಯಾಂಕ್ ನಲ್ಲಿ ಸಾಲ ಪಡೆದಿರುತ್ತಾರೆಂದರೆ ನಾವು ನೀಡಿದ ಎನ್.ಒ.ಸಿ. ಆಧಾರದ ಮೇಲೆ ಅವರು ಸಾಲ ಪಡೆದಿರುತ್ತಾರೆ. ಬ್ಯಾಂಕ್ ನಲ್ಲಿ ಕೇವಲ ಎನ್.ಡಿ.ಸಿ. ಆಧಾರದ ಮೇಲೆ ಮೂಲ ದಾಖಲೆಗಳಿಲ್ಲದೇ ಸಾಲ ನೀಡುವುದಿಲ್ಲವೆಂದರೆ ಎನ್.ಒ.ಸಿ. ಆಧಾರದ ಮೇಲೆ ಬೆಳೆ ಸಾಲ ಕೊಡುತ್ತಾರೆ. ಪ್ರಸ್ತುತ ಅಮಲ್ಜಾರಿ ಅರ್ಜಿ ಸಲ್ಲಿಸುವಾಗ ತೀರ್ಪುಋಣಿಯು ರೂ. 36,360/– ಗಳನ್ನು ಪಾವತಿಸಬೇಕೆಂದು ಸಲ್ಲಿಸಿದ್ದೆವು ಎಂದರೆ ಸರಿ. ಹಣ ವಸೂಲಾತಿಗಾಗಿ ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿರುವಾಗ ಪಕ್ಷಗಾರರಿಗೆ ಬ್ಯಾಂಕ್ ನಿಂದ ನೋಟೀಸ್ ನೀಡುವಂತಿಲ್ಲವೆಂಬ ನಿಯಮ ಗೊತ್ತಿರುತ್ತದೆ. ಈ ರೀತಿ ನಿಯಮ ಗೊತ್ತಿದ್ದರೂ ಕೂಡ ದಿನಾಂಕಃ 28.01.2024 ರಂದು ನಮ್ಮ ಬ್ಯಾಂಕ್ ನಿಂದ ತೀರ್ಪುಋಣಿಗೆ ನೋಟೀಸ್ ನೀಡಿರುತ್ತೇವೆ ಎಂದರೆ ಕರ್ನಾಟಕ ಸರ್ಕಾರದ

ಆದೇಶದಂತೆ ಯಾರು ಸುಸ್ತೀದಾರರಿರುತ್ತಾರೋ ಅವರೆಲ್ಲರಿಗೂ ತಿಳುವಳಿಕೆ ಪತ್ರ ನೀಡಬೇಕೆಂದು ನಿರ್ದೇಶನ ಇದ್ದುದರಿಂದ ನಾವು ತೀರ್ಪುಋಣಿಗೆ ನೋಟೀಸ್ ನ್ನು ನೀಡಿರುತ್ತೇವೆ. ಸಾಲಗಾರರು ಸಂಪೂರ್ಣ ಹಣ ಪಾವತಿಸಿದ್ದರೂ ಕೂಡ ಅವರು ಸುಸ್ತಿದಾರರಾಗಿರುತ್ತಾರೆಂದು ಹಲವಾರು ಜನರಿಂದ ಪುನಃ ಹಣ ಪಾವತಿಸಿಕೊಂಡು ಆಕ್ರಮ ಲಾಭ ಪಡೆಯುತ್ತಿದ್ದರಿಂದ ನಮ್ಮ ಬ್ಯಾಂಕ್ ನ ವಿರುದ್ಧ ಹಲವಾರು ಪ್ರಕರಣಗಳು ದಾಖಲಾಗಿರುತ್ತವೆ ಎಂದರೆ ಸರಿಯಲ್ಲ. ತೀರ್ಪುಋಣಿಯು ನಮ್ಮ ಬ್ಯಾಂಕ್ ಗೆ ಪಾವತಿಸಬೇಕಾದ ಎಲ್ಲಾ ಸಾಲದ ಹಣವನ್ನು ಮರುಪಾವತಿಸಿದ ನಂತರವೇ ನಿ.ಡಿ.–1 ರಂತೆ ಎನ್.ಡಿ.ಸಿ. ನೀಡಿದ್ದರೂ ಕೂಡ ಪುನಃ ಅವರು ಸಾಲದ ಕಂತನ್ನು ಪಾವತಿಸಬೇಕೆಂದು ಆಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ತೀರ್ಪುಋಣಿಯು ನಮ್ಮ ಬ್ಯಾಂಕ್ ಗೆ ಸಂಪೂರ್ಣ ಸಾಲದ ಹಣವನ್ನು ಪಾವತಿಸಿ ಎನ್.ಡಿ.ಸಿ. ಮತ್ತು ಮೂಲ ದಾಖಲೆಗಳನ್ನು ಪಡೆದು ಬೇರೆ ಬ್ಯಾಂಕಿನಲ್ಲಿ ಸಾಲ ಪಡೆದಿರುವುದರಿಂದ ತೀರ್ಪುಋಣಿಯು ಯಾವುದೇ ಹಣವನ್ನು ಪಾವತಿಸಲು ಭಾಧ್ಯಸ್ಥರಿರುವುದಿಲ್ಲವೆಂದರೆ ಸರಿಯಲ್ಲ. ತೀರ್ಪುಋಣಿ ಪಾವತಿಸಿರುವ ಸಾಲದ ರಸೀದಿಗಳನ್ನು ಹಾಜರುಪಡಿಸಿದರೆ ಸತ್ಯಾಂಶ ಹೊರಬರುತ್ತದೆಂಬ ಉದ್ದೇಶದಿಂದ ಅವುಗಳನ್ನು ಹಾಜರುಪಡಿಸಿರುವುದಿಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**